ಶ್ರೀ ಸಿದ್ದರಾಮಯ್ಯ.—ಹಿಂದಿನ ಸಚಿವರು ಇದನ್ನು ಪರಿಶೀಲಿಸುವುದಾಗಿ ಹೇಳಿದ್ದರು. ಈಗ ಅರೆಸುವಿಹಾರಿ ಬಸ್ ಹಾಕಲಾಗಿದೆ. ಮತ್ತೆ ಅಲ್ಲಿಗೆ ಸುಖವಿಹಾರಿ ಬಸ್ ಹಾಕಲು ಸಾಧ್ಯವಾಗಲಿಕ್ಕಿಲ್ಲ. ಆದರೂ ಮತ್ತೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಕಾಶಾಲ.—ಪರಿಶೀಲನೆ ಮಾಡುವುದಾಗಿ ಹಿಂದೆಯೇ ಹೇಳಿದ್ದಾರೆ. ಈಗ ಆದನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಪರಿಶೀಲನೆ ಮಾಡಂತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪರಿಶಿಷ್ಟ ಜಾತಿ ಮಂತ್ತು ಪಂಗಡಗಳ ವಿದ್ಯಾರ್ಥಿನಿಲಯಗಳ ತೊಂದರೆಗಳನ್ನು ಅಭ್ಯಸಿಸುವ ಬಗ್ಗೆ ಸಮಿತಿ ರಚನೆ ಕುರಿತು

೫೦೩೫. ಶ್ರೀ ಎಂ. ಎಸ್. ಕೃಷ್ಣನ್, (ರಾಜಾಜಿನಗರ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕ್ರೀಡಾ ಹಾಗೂ ಯುವಜನ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀ ಗುರುಪ್ರಸಾದ್ ವಿಧಾನಸಭೆ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿ ಮಂತ್ತು ಪಂಗಡಗಳ ವಿದ್ಯಾರ್ಥಿನಿಲಯಗಳ ಬಗ್ಗೆ ರಚಿಸಲಾದ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ, ಆದರ ಶಿಫಾರಸ್ಸುಗಳೇನು ?

ಇ) ಸದರಿ ಸಮಿತಿಯು ಶಿಫಾರಸ್ಸುಗಳನ್ನು ಎಂದಿನಿಂದ ಜಾರಿಗೆ ತರಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಸಮಿತಿಯು ಈ ಕೆಳಕಂಡ ಮುಖ್ಯ ಶಿಫಾರಸ್ಸುಗಳನ್ನು ಮಾಡಿರುತ್ತದೆ,

೧) ರಾಜ್ಯಮಟ್ಟದಲ್ಲಿ ಹಾಸ್ಟೆಲ್ ನಿರ್ದೇಶನಾಲಯ ಸೃಷ್ಟಿಸಿ ನಿರ್ದೇಶಕರು ರಾಜ್ಯ ಮಟ್ಟದಲ್ಲಿ ವಿಭಾಗ ಮಟ್ಟದಲ್ಲಿ ಜಂಟಿ ನಿರ್ದೇಶಕರು ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರು, ಹೋಬಳಿ ಮಟ್ಟದಲ್ಲಿ ಪರಿವೀಕ್ಷಕರು.

೨) ಎಲ್ಲಾ ವಿದ್ಯಾರ್ಥಿನಿಲಯಗಳನ್ನು ಸಾರ್ವಜನಿಕ ವಿದ್ಯಾರ್ಥಿನಿಲಯಗಳೆಂದು ಕರೆಯಲು ಮತ್ತು ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದ ಮತ್ತು ಹಿಂದುಳಿದ ಜಾತಿ ವಿದ್ಯಾರ್ಥಿಗಳನ್ನು ೪೦-೫೦ ಪರಿಮಾಣದಲ್ಲಿ ಸೇರ್ಪಡೆ ಮಾಡಿಕೊಳ್ಳಲು ಸೂಚಿಸಿದೆ.

೩) ವೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಊಟದ ವೆಚ್ಚವನ್ನು ಪ್ರತಿ ತಿಂಗಳು, ಪ್ರತಿ ವಿದ್ಯಾರ್ಥಿಗೆ ರೂ ೧೦೦-೦೨ ರಿಂದ ರೂ. ೧೫೦-೦೦ ಕ್ಕೂ, ಕಾಲೇಜು ವಿದ್ಯಾರ್ಥಿನಿಲಯಂ ಗಳಲ್ಲಿ ಪ್ರತಿ ತಿಂಗಳೂ ಪ್ರತಿ ವಿದ್ಯಾರ್ಥಿಗೆ ರೂ, ೧೫೦-೦೦ ರಿಂದ ರೂ. ೨೫೦-೦೦ ಕ್ಕೂ ಮತ್ತು ವೃತ್ತಿಪರ ಕಾಲೇಜುಗಳಲ್ಲಿ ಅಂದರೆ ತಾಂತ್ರಿಕ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ರೂ. ೩೦೦-೦೦ ರವರೆಗೆ ಹೆಚ್ಚುವರಿ ಮಾಡಲು ಶಿಫಾರಸ್ಸು ಮಾಡಿದೆ

೪) ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಸ್ವಂತ ಕಟ್ಟಡ ನಿರ್ಮಾಣ ಮತ್ತು ವಸತಿ ವಿದ್ಯಾರ್ಥಿ ನಿಲಯಕ್ಕೆ ೧೫೦ ವಿದ್ಯಾರ್ಥಿಗಳ ಸಂಖ್ಯೆ ಮೀರದಂತೆ ನಿರ್ಬಂಧ ವಿಧಿಸಲು ಸೂಚಿಸಿದೆ.

೫) ವಿದ್ಯಾರ್ಥಿ ಸಮಿತಿ ನೇಮಿಸಲು ಅಂದರೆ, ಭೋಜನ ಸಮಿತಿ ವಿರೀದಿ ಸಮಿತಿ ನಿರ್ವಹಣಾ ಸಮಿತಿ, ಲೈಬ್ರರಿ ಸಮಿತಿ, ಮನರಂಜನಾ ಸಮಿತಿ ಮತ್ತು ದೂರುಗಳ ಸಮಿತಿ ಸೂಚಿಸಿದ್ದಾರೆ.

೬) ಹಾಸ್ಟೆಲ್‌ಗಳಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಜನತಾ ಬಜಾರ್ ಸಹಕಾರಿ ಸಂಘಗಳು, ಅಥವಾ ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದ ಮುಖಾಂತರ ಖರೀದಿಸಲು ಸೂಚಿಸಿದೆ.

೭) ಎಲ್ಲಾ ವಿದ್ಯಾರ್ಥಿನಿಲಯದಲ್ಲಿ ಪುಸ್ತಕ ಭಂಡಾರ ತೆರೆಯಲು ಸೂಚಿಸಿದೆ.

೮) ಸರ್ಕಾರಿ ವೈದ್ಯರಿಂದ ಆರೋಗ್ಯ ತಪಾಸಣೆ ಮತ್ತು ಔಷಧ ಒದಗಿಸುವ ಬಗ್ಗೆ.

೯) ಅತಿಥಿ ಸತ್ಕಾರ, ವಿದ್ಯಾರ್ಥಿಗಳ ತಂದೆ ತಾಯಿಯವರಿಗೆ.

೧೦) ಮನರಂಜನಾ ಚಟುವಟಿಕೆ ಮತ್ತು ಚರ್ಚಾಸ್ಪರ್ಧೆ.

೧೧) ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಎನ್.ಸಿ.ಸಿ. ಯಲ್ಲಿ ನೋಂದಣಿ ಮಾಡಿಸುವ ಬಗ್ಗೆ.

೧೨) ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಹಾಸ್ಟೆಲ್‌ಗೆ ಸೇರಿಸಿಕೊಳ್ಳುವ ಬಗ್ಗೆ ಮತ್ತು ಫೀ ರಿಯಾಯಿತಿ.

೧೩) ಪರಿಸರ ಮತ್ತು ನೈರ್ಮಲ್ಯ ಹೆಚ್ಚು ಸ್ನಾನ ಮನೆ ಕಕ್ಕಸ್ಸು ಮತ್ತು ಮರಗಿಡಗಳನ್ನು ನೆಡುವುದು.

೫) ಸಮಿತಿಯು ಶಿಫಾರಸ್ಸು ಮಾಡಿದ ಕೆಲವು ವಿಷಯಗಳ ಬಗ್ಗೆ ಅಂದರೆ, ಊಟದ ದರವನ್ನು ಹೆಚ್ಚಿಸುವ ಬಗ್ಗೆ ಖಾಸಗಿ ವಿದ್ಯಾರ್ಥಿನಿಲಯಂಗಳಿಗೆ ಸರ್ಕಾರ ವಿದ್ಯಾರ್ಥಿನಿಲಯಗಳಿಗೆ ಒದಗಿಸಿರುವ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಮಂತ್ರಿ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ಹಂತ ಹಂತವಾಗಿ ಕಟ್ಟಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ವಿದ್ಯಾರ್ಥಿನಿಲಯಗಳಿಗೆ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವ ಬಗ್ಗೆ ಹಾಗೂ ವಲಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ತೆರೆಯುವ ವಿಷಯವು ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು:

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೫೭ ನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಇಡಲಾಗಿದೆ.

ಐ.ಟಿ.ಐ. ಕಾಲೇಜುಗಳ ಬಗ್ಗೆ

೨೯೭೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐ. ಟಿ ಐ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ೫೦ ರೂ. ಭತ್ಯವನ್ನು ಜಾಸ್ತಿ ಮಾಡುವುದರ ಬಗ್ಗೆ ಯೋಜನೆ ರೂಪಿಸಲಾಗಿದೆಯೆ ?

ಆ) ಸದರೀ ಕಾಲೇಜುಗಳಲ್ಲಿ ಹೊಸ ಹೊಸ ಯಂತ್ರೋಪಕರಣಗಳನ್ನು ಅಳವಡಿಸುವ ಯೋಜನೆ ಏನಾದರೂ ಇದೆಯೇ ?

ಇ) ಸದರೀ ಕಾಲೇಜುಗಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸುವುದರ ಬಗ್ಗೆ ಯೋಜನೆ ರೂಪಿಸಲಾಗಿದೆಯೆ ?

ಶ್ರೀ ಟಿ. ಜಿ. ಆರ್, ಸಿಂಧ್ಯ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಇಲ್ಲ.
ಆ) ಇದೆ.
ಇ) ಇಲ್ಲ.